# ಕವಿತೆ ಅಂಗಡಿಯಲ್ಲಿ

ಒಂದು ಸಂಜೆ
ಪೇಟೆಗೆ ಹೋದಾಗ
'ಇಲ್ಲಿ ಕವಿತೆ ರಿಪೇರಿ ಮಾಡಲಾಗುತ್ತದೆ'
ಎಂಬ ಬೋರ್ಡನು ನೋಡಿ
ಒಳಗೆ ಹೋದೆ.
ಎಲ್ಲೆಂದರಲ್ಲಿ ನಮನಮೂನೆಯ
ಕವಿಗಳು, ಕವನ ಕೊಡಲು ಬಂದವರು,
ಕೊಟ್ಟಿದ್ದನ್ನು ಪಡೆಯಲು ಬಂದವರು
ಆ ಗಜಿಬಿಜಿಯಲ್ಲಿ
ರಿಪೇರಿಯವ ಹೇಳುತ್ತಿದ್ದ:
'ನಿಮ್ಮ ಕವಿತೆಯ ಅಲಂಕಾರ
ಸರಿ ಮಾಡಬೇಕು, ತಡವಾಗಬಹುದು'
'ನಿಮ್ಮ ರೂಪಕ ಪ್ರತಿಮೆಗಳು ಹಳತು'
'ಗೇಯವಾದರೆ ಗೇಯ
ಸ್ವಚ್ಛಂದವಾದರೆ ಹಾಗೆಯೇ ಬರೆಯಿರಿ'
'ಹೋಗ್ರಿ! ನಿಮ್ಮದು ಅಕ್ಷರ ಜೋಡಣೆಯೇ
ಸರಿ ಇಲ್ಲ, ಅದಕ್ಕೆಲ್ಲ
ಚಾರ್ಜ್ ಹೆಚ್ಚಾಗುತ್ತದೆ'
'ಇದು ನಮ್ಮ ಮಗಳದು,
ಆಗ್ತದೊ ನೋಡಿ'
'ಲೇಡೀಸ್ ಆಗಿರಲಿ ಜಂಟ್ಸ್‌ದಾಗಿರಲಿ'
ಎಡದ್ದಾಗಿರಲಿ ಬಲದ್ದಾಗಿರಲಿ
ನಮಗೆ ಕವಿತೆ ಎಂದರೆ
ಕವಿತೆ ಮಾತ್ರ!'




'ಓ ನಿಮದು ಮೊನ್ನೆಯೇ ಆಗಿದೆ,
ಆದರೆ ಇದು ಸ್ವಲ್ಪ ಹಳೆದಲ್ರಿ...'
'ಏನ್ರಿ ಹಾಗೆ ಹೇಳ್ತೀರಿ?'
'ಅಲ್ರಿ, ಕವಿತೆ
ಕೊಡೆಯ ಹಾಗೆ
ಆಗಾಗ ಕಡ್ಡಿ ಬದಲಾಯಿಸಬೇಕು
ಹಿಡಿಕೆ ಬೇರೆ ಹಾಕಬೇಕು
ಕಾವು ಬೇರೆಯಾಗಬೇಕು
ಅರಿವೆಯನ್ನೂ ಬದಲಿಸಬೇಕು...'

ತಲೆ ತಿರುಗಿದಂತಾಗಿ
ಹೊರಗೆ ಬಂದೆ

ಆಕಾಶದ ತುಂಬೆಲ್ಲ ಹರಿದು
ಬಿದ್ದ ನಕ್ಷತ್ರಗಳು ಮತ್ತು
ಬಣ್ಣಗಳ ಹುಚ್ಚು ಹೊಳೆ.

● ರಾಜು ಹೆಗಡೆ